**<u>ದಿನಾಂಕಃ 17.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಸಿ.ಎಂ.ಕೆ ವಕೀಲರಿಂದಃ</u>**

1) ಮಮತಾ ರವರಿಗೆ ಮರಿಸ್ವಾಮಿ ಎಂಬ ಮಗ ಇರುತ್ತಾರೆ ಎಂದರೆ ಸರಿ. ಆತ ಊರಿನಲ್ಲಿಯೇ ಇದ್ದು ಆತನಿಗೆ ಪಿತ್ರಾರ್ಜಿತವಾಗಿ ಬಂದಂತಹ ಸ್ವತ್ತುಗಳನ್ನು ಉಳುಮೆ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ಸದರಿ ಮಮತಾ ರವರ ಜಮೀನಿನಲ್ಲಿ ಅಪ್ಪಾಜಿಯವರು ವ್ಯವಸಾಯ ಮಾಡುತ್ತಿದ್ದಾರೆಯೇ ಅಥವಾ ನೀವು ವ್ಯವಸಾಯ ಮಾಡುತ್ತಿದ್ದೀರಾ ಎಂದರೆ ಸಾಕ್ಷಿಯು ತಾನೇ ವ್ಯವಸಾಯ ಮಾಡುತ್ತಿರುವುದಾಗಿ ಸಾಕ್ಷ್ಯ ನುಡಿಯುತ್ತಾರೆ. ಚಿಕ್ಕತಾಯಮ್ಮ ನನ್ನ ತಂದೆಯ ಸಹೋದರಿ ಎಂದರೆ ಸರಿ. ಆಕೆ ನನ್ನ ಚಿಕ್ಕಪ್ಪ ಅಪ್ಪಾಜಿಯವರ ಸಹೋದರಿ ಆಗಿರುತ್ತಾರೆ ಎಂದರೆ ಸರಿ. ಮಮತಾರವರ ಜಮೀನಿನಲ್ಲಿ ಒಂದು ಹಲಸಿನ ಮರ ಹೊರತುಪಡಿಸಿ ಬೇರೆ ಯಾವುದೇ ಮರಗಳು ಮತ್ತು ಬೆಳೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಮಮತಾರವರ ಜಮೀನಿನಲ್ಲಿ ನೀರಿನ ವ್ಯವಸ್ಥೆ ಇರುವುದಿಲ್ಲ ಎಂದರೆ ಸಾಕ್ಷಿಯು ತಾನೇ ಆ ಜಮೀನಿನಲ್ಲಿ ಬೋರ್ ವೆಲ್ಲ್ ಹಾಕಿಸಿರುವುದಾಗಿ ನುಡಿಯುತ್ತಾರೆ. ಸದರಿ ಬೋರ್ ವೆಲ್ ಗೆ ಸಂಬಂಧಿಸಿದಂತೆ ದಾಖಲೆಗಳು ಮಮತಾರವರ ಹೆಸರಿನಲಿ ಇರುತ್ತದೆ. ಸಾಕ್ಷಿಯು ಮುಂದುವರೆದು ಈ ಹಿಂದೆ ಆ ಸ್ವತ್ತಿನಲ್ಲಿ ಬೋರ್ ವೆಲ್ ಇದ್ದು ತಾನು ಅದನ್ನು ರಿಪೇರಿ ಮಾಡಿಸಿರುವುದಾಗಿ ನುಡಿಯುತ್ತಾರೆ. ಮಮತಾರವರ ಸರ್ವೆ ನಂ. 17 ಆಗಿರುತ್ತದೆ. ದಾವಾ ಸ್ವತ್ತಿನಿಂದ 200 ಮೀಟರ್ ಅಂತರದಲ್ಲಿ ದಾವಾ ಸ್ವತ್ತಿನ ಎದುರಿಗೆ ಮಮತಾರವರ ಜಮೀನು ಇರುತ್ತದೆ. ದಾವಾ ಸ್ವತ್ತಿನ ಮುಂಭಾಗ ಮಮತಾರವರಿಗೆ ಸೇರಿದ ಇನ್ನೊಂದು ಜಾಗ ಇರುತ್ತದೆ ಹಾಗೂ ತದನಂತರ ಮಹೇಶ್ ರವರಿಗೆ ಸೇರಿದ ಜಾಗ ಇರುತ್ತದೆ. ನಾನು ದಾವಾ ಸ್ವತ್ತಿನಿಂದ 200 ಮೀಟರ್ ದೂರದಲ್ಲಿರುವ ಮಮತಾರವರ ಜಮೀನಿಗೆ ಉಳುಮೆ ಮಾಡುತ್ತಿದ್ದೇನೆ.

2) ಮಮತಾರವರು ತನ್ನ ಸ್ವತ್ತನ್ನು ಬೋರೇಗೌಡರಿಂದ ಖರೀದಿ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ 7 – 8 ಮಾವಿನ ಮರಗಳು ಇರುತ್ತದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾನು ದಾವಾ ಸ್ವತ್ತಿನಲ್ಲಿ 5 ಮಾವಿನ ಮರಗಳು ಇರುವುದಾಗಿ ಬರೆಸಿರಬಹುದು. ನಿಖರವಾಗಿ ಅಲ್ಲಿ ಎಷ್ಟು ಮರಗಳು ಇರುವುದಾಗಿ ನಾನು ಗಮನಿಸಿರುವುದಿಲ್ಲ. ದಾವಾ ಸ್ವತ್ತಿನಲ್ಲಿ 7 – 8 ಮಾವಿನ ಮರಗಳು ಇರುತ್ತದೆ ಎಂದರೆ ಸಾಕ್ಷಿಯು ತಾನು ಆ ಸ್ವತ್ತಿನ ಮುಂದೆ

ರಸ್ತೆಯಲ್ಲಿ ಬೈಕಿನಲ್ಲಿ ಓಡಾಡುವಾಗ ಮಾತ್ರ ಮರಗಳನ್ನು ಹಾಗೆ ನೋಡಿರುವುದಾಗಿ ಮತ್ತು ಅಲ್ಲಿ ನಿಖರವಾಗಿ ಎಷ್ಟು ಮರಗಳು ಇರುತ್ತವೆ ಎಂದು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಆಲದ ಮರ ಇರುವುದಿಲ್ಲ. ನಾನು ಮಮತಾರವರ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸರ್ವೆ ನಂ. 40 ಅಗಿದ್ದು ಅದು ಸರ್ಕಾರಿ ಗೋಮಾಳ ಆಗಿತ್ತು ಎಂದರೆ ಸಾಕ್ಷಿಯು ಅದು ಗೋಮಾಳ ಆಗಿರುವುದಿಲ್ಲ ಮತ್ತು ಅದರ ಸರ್ವೆ ನಂ.188 ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಪ್ರತಿವಾದಿಗಳ ಸ್ವತ್ತಿಗೆ ಹೊಂದಿಕೊಂಡಂತೆ ಇದ್ದು ಪ್ರತಿವಾದಿಗಳು ತಮ್ಮ ಜಮೀನು ಹಾಗೂ ದಾವಾ ಸ್ವತ್ತನ್ನು ಸೇರಿ ಉಳುಮೆ ಮಾಡುತ್ತಿದ್ದರೆ ಎಂದರೆ ಸಾಕ್ಷಿಯು 1ನೇ ವಾದಿ ಉಳುಮೆ ಮಾಡುತ್ತಿರುವುದಾಗಿ ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಒಂದು ವಿದ್ಯೂತ್ತ್ ಚ್ಛಕ್ತಿ ಕಂಬ ಇರುತದೆ ಎಂದರೆ ಸರಿ.ಸದರಿ ಕಂಬದಿಂದ ಪ್ರತಿವಾದಿಗಳು ತಮ್ಮ ಮೋಟಾರ್ ಪಂಪ್ ಸೆಟ್ ಗೆ ಸಂಪರ್ಕವನ್ನು ಪಡೆದಿದ್ದಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಾನು ರಸ್ತೆಯಲ್ಲಿ ಓಡಾಡುವಾಗ ಅಲ್ಲಿ ವಿದ್ಯೂತ್ತ್ ಚ್ಛಕ್ತಿ ಕಂಬ ಕಾಣುತ್ತದೆ ಆದರೆ ಅದರಿಂದ ಯಾರು ಯಾರಿಗೆ ಸಂಪರ್ಕ ನೀಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಇದ್ದ 3 ಮಾವಿನ ಗಿಡಗಳನ್ನು ವಾದಿಗಳು ಕಿತ್ತು ಹಾಕಿದ ಸಂಬಂದ 2020ನೇ ಸಾಲಿನಲ್ಲಿ ಪ್ರತಿವಾದಿಗಳು ಠಾಣೆಗೆ ದೂರು ಸಲ್ಲಿಸಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಚಿಕ್ಕತಾಯಮ್ಮ ನನ್ನ ಅತ್ತೇ ಇರುವ ಕಾರಣ ಆಕೆಗೆ ಸಹಾಯಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಿಂದ 200 ಮೀಟರ್ ದೂರದಲ್ಲಿ ಇರುವ ಮಮತಾರವರ ಜಮೀನನ್ನು ಮಾತ್ರ ನಾನು ಉಳುಮೆ ಮಾಡುತ್ತಿದ್ದೇನೆ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳೇ ಸ್ವಾಧೀನದಲ್ಲಿ ಇದ್ದು ಅವರೇ ಈ ಬೆಳೆಗಳನ್ನು ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**